# ಸಮ್ಮೇಳನದ ಆಶಯ ಅನುಷ್ಠಾನಗೊಂಡರೆ ಎಲ್ಲರ ಶ್ರಮ ಸಾರ್ಥಕ

ಸ್ವರ್ಣವಲ್ಲೀ ಮಠವನ್ನು ಕೇಂದ್ರವಾಗಿರಿಸಿಕೊಂಡು ಇತ್ತೀಚೆಗೆ ನಡೆದ ಕೆರೆ ಸಮ್ಮೇಳನ ವಿಶಿಷ್ಟ ಅನುಭವ ಸ್ವರ್ಣಕ್ಕೆ ತಂದುಕೊಟ್ಟಿದೆ.

ಮೊದಲೆಲ್ಲ ಈ ಕೆರೆ, ಕೆರೆ ಸುತ್ತಲಿನ ಗಿಡ–ಮರಗಳು,ಅಲ್ಲಿನ ಜೀವಿಗಳು ಅರ್ಥವಿಲ್ಲದ ವಸ್ತುಗಳೆನಿಸುತ್ತಿದ್ದವು. ಕಣ್ಣೆದುರಿಗೇ ಸಾವಿರಾರು ಔಷಧಿ ಸಸ್ಯಗಳಿದ್ದರೂ ಅವುಗಳ ಉಪಯೋಗಗಳೇ ತಿಳಿದಿರಲಿಲ್ಲ. ಆ ಬಗ್ಗೆ ಕುತೂಹಲವೂ ಇರಲಿಲ್ಲ. ಕೆರೆಯ ವಿಶೇಷತೆ ಮತ್ತು ಅದನ್ನು ರಕ್ಷಿಸುವ ವಿಚಾರವೂ ಬರುತ್ತಿರಲಿಲ್ಲ. ಆದರೆ ಈ ಕೆರೆ ಸಮ್ಮೇಳನ–2014 ರ ನಂತರ ಮನಸ್ಸಿನಲ್ಲಿ ಏನೋ ಒಂದು ಕುತೂಹಲ ಮೂಡಿದೆ. ಆಹಾರ ಶಕ್ತಿ ಹೊಂದಿದ ಸಸ್ಯಗಳನ್ನು ಮೊದಲು ಕಂಡರೂ ಕಾಣದೇ ಹೋದ ರೀತಿಯಲ್ಲಿದ್ದ ನನಗೆ ಆ ಗಿಡಗಂಟಿಗಳಲ್ಲಿ ಅಡಗಿದ ಜ್ಞಾನವನ್ನು ಪಡೆಯುವ ಅಪೇಕ್ಷೆ. ಈ ಬದಲಾವಣೆಯ ಶ್ರೇಯಸ್ಸು ಭಾರತೀಯ ವಿಜ್ಞಾನ ಸಂಸ್ಥೆಯದ್ದು. ಇದರ ಹೊರತಾಗಿ ನನಗೆ ಪರಿಸರದಲ್ಲಿ ಅಡಗಿದ ಜ್ಞಾನವನ್ನು ಪಡೆಯಲು ಸಹಕರಿಸಿದ ಪಾಲಕರು, ಗ್ರಾಮಸ್ಥರು, ಉಸ್ತುವಾರಿ ಶಿಕ್ಷಕ ವಿದ್ಯಾ ಬಾಡ್ಕರ್‌ರವರು, ಸಸ್ಯಗಳನ್ನು ಪರಿಚಯಿಸಿ ಅವುಗಳ ಔಷಧೋಪಯೋಗಗಳನ್ನು ತಿಳಿಸಿದ ಉಮಾಪತಿ ಭಟ್ಟ ಮತ್ತು ಅಭ್ಯಾಸ ಮಂಡಣೆಯಲ್ಲಿ ಆಧಾರವಾದ ಸಹಾಯವನ್ನು ಮಾಡಿದ ಲಕ್ಷ್ಮೀಶ ಹೆಗಡೆ, ಗಣಪತಿ ಕೆ.ಹೆಗಡೆ ಮತ್ತು ವಸಂತ ಭಟ್ಟ ಇವರೆಲ್ಲರಿಗೂ ನಾನು ಚಿರಋಣಿ.

ಕೆರೆಗಳ ಈ ಅಧ್ಯಯನವನ್ನು ಮಕ್ಕಳು ಕೈಗೊಳ್ಳುವುದಾದರೆ ಇಂಥ ಕಾರ್ಯಕ್ರಮಗಳನ್ನು ರಜೆಗಳಲ್ಲಾಗ ಇಟ್ಟದ್ದೇ ಆದರೆ, ವಿದ್ಯಾರ್ಥಿಗಳಿಗೆ ತಮ್ಮ ಶಾಲೆಯ ಅಭ್ಯಾಸದಲ್ಲಿ ತೊಡಕಾಗುವುದಿಲ್ಲ. ಇದು ನನ್ನ ಅನಿಸಿಕೆ.

ಕೆರೆಯ ರಕ್ಷಣೆಯ ವಿಚಾರವು ಕೆರೆ ಸಮ್ಮೇಳನಕ್ಕಷ್ಟೇ ಅಥವಾ ಮಕ್ಕಳಿಗಷ್ಟೇ ಸೀಮಿತವಾಗದೇ, ಪ್ರತಿನಿತ್ಯ ಎಲ್ಲರೂ ಯೋಚಿಸಿ, ರಕ್ಷಣಾ ಕಾರ್ಯ ಮಾಡುವಂತಾದರೆ ಅಷ್ಟು ದಿನ ವಿದ್ಯಾರ್ಥಿಗಳ ಹಾಗೂ ಭಾರತೀಯ ವಿಜ್ಞಾನ ಸಂಸ್ಥೆಯ ಪರಿಶ್ರಮವೂ ಸಾರ್ಥಕವಾಗುತ್ತದೆ.

—ವಿಭವ ಮಂಗಳೂರ, 9ನೇ ತರಗತಿ, ಶ್ರೀನಿಕೇತನ ಶಾಲೆ